.07.

ದಿನಾಂಕ 04.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಟಿ ಎನ್ ಎಸ್ ವಕೀಲರಿಂದಃ**

ನಾನು ಶಿಕ್ಷಕಿಯಾಗಿದ್ದು, ಪದೋನ್ನತಿ ಹೊಂದಿ ಹೈಸ್ಕೂಲ್ ನಲ್ಲಿ ಹೆಚ್ ಎಂ ಆಗಿದ್ದೇನೆ. ನನಗೆ 80,000/ ಸಂಬಳ ಬರುತ್ತದೆ. ನಾನು ಹಾಗೂ ಅರ್ಜಿದಾರನ ಜೊತೆ ಇದೂವರೆಗೂ ಚೆನ್ನಾಗಿದ್ದೇವೆ. ನನಗೂ ಮತ್ತು ಅರ್ಜಿದಾರರಿಗೂ ಯಾವುದೇ ಮನಸ್ಥಾಪ ಇದೇಯಾ ಎಂದರೆ ಸಾಕ್ಷಿಯು ನನ್ನನ್ನು ಮನೆಯಿಂದ ಹೊರಗಡೆ ಹಾಕಿದಾಗ ಕ್ರಿಮಿನಲ್ ಕೇಸಾಗಿದೆ ಎಂದು ನುಡಿದಿದ್ದಾರೆ. 14.02.2024 ರಲ್ಲಿ ಕೆಲಸ ಮುಗಿಸಿ ಮನೆಗೆ ಬಂದಾಗ ಸಂಜೆ 5.30 ಸಮಯದಲ್ಲಿ ನನ್ನನ್ನು ಹೊರಗೆ ಹಾಕಿದ್ದಾರೆ. ನನ್ನ ಅತ್ತೆ ಎಲ್ಲಾರೂ ಮನೆಯಲ್ಲಿದ್ದು ನನಗೆ 10 ಲಕ್ಷ ತೆಗೆದುಕೊಂಡು ಬಾ ಎಂದು ಹೊರಗಡೆ ಹಾಕಿದ್ದಾರೆ. 10 ಲಕ್ಷ ಹಣ ಹೊರೆತು ಪಡಿಸಿ ಬೇರೆ ಯಾವುದಾದರೂ ಮನಸ್ಥಾಪ ಇದೇಯಾ ಎಂದರೆ ಆಗಾಗ ನನಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ಕೊಡುತ್ತಿದ್ದು ಮದುವೆ ಆದಗಿನಿಂದಲೂ ಹೀಗೆ ನಡೆಯುತ್ತಿದೆ. ನಾವು ಮದುವೆಯಾದ ನಂತರ ಸಂಸಾರದಲ್ಲಿ ಸ್ವಲ್ಪ ಸುಖ ಮತ್ತು ದುಃಖ ಇತ್ತು.

2) ಕುರುಬುರಿನಲ್ಲಿ ಅತ್ತೆ ಮನೆಯಲ್ಲಿ ಮದುವೆಯಾದ ನಂತರರಿಂದ ವಾಸ ಮಾಡುತ್ತಿದ್ದೇವು. ಅಲ್ಲಿ 6 ವರ್ಷ ಇದ್ದೇವು. ಮತ್ತೇ ತವರು ಮನೆಯಲ್ಲಿ 2 ವರ್ಷ ಇದ್ದು, ನಂತರ ಮಗನ ಶಾಲೆಗೆ ಸೇರಿಸ ಬೇಕಾದ ಕಾರಣ ಮನಸ್ಥಾಪ ಆಗುವುದು ಬೇಡ ನಾವು ಕುರುಬುರಿಗೆ ಹೊರಟು ಹೋಗುಣ ಎಂದು ನಾನು ಹೇಳಿದ್ದೆ ಅದಕ್ಕೆ ಅರ್ಜಿದಾರರು ಮನೆನೆ ತೆಗೆದುಕೊಳ್ಳೋಣ ಎಂದು ಹೇಳಿದ್ದು ಅದಕ್ಕೆ ನಾನು ನಾನು ಹೌಸಿಂಗ್ ಲೋನ್ ಮಾಡಿದ್ದು ಹಾಗೂ ನನ್ನ ತಂದೆ ತಾಯಿ ಮತ್ತು ಅಕ್ಕ ತಂಗಿಯರು ಸ್ವಲ್ಪ ಹಣ ಸೇರಿಸಿ ಅಂಜನಿ ಬಡಾವಣೆಯಲ್ಲಿ ತೆಗೆದುಕೊಂಡಿರುತ್ತೇವೆ. ನಾನು ಲೋನ್ ಮಾಡಿರುವ ದಾಖಲಾತಿಗಳನ್ನು ಕೋರ್ಟನಲ್ಲಿ ಹಾಜರು ಮಾಡಿರುತ್ತೇನೆ. ಸದರಿ ಹೌಸಿಂಗ್ ಲೋನ್ ನನ್ನ ಹೆಸರಿನಲ್ಲಿದೆ. ನಿಶಾನೆ ಡಿ12 ದಾಖಲಾತಿಯನ್ನು ನೋಡಿ ಸಾಲದ ದಾಖಲಾತಿ ಎಂದು ತಿಳಿಸಿದ್ದು ಅದರಲ್ಲಿ ಅರ್ಜಿದಾರರ ಹೆಸರು ಇದೆಯಾ ಎಂದರೆ ಸಾಕ್ಷಿಯು ನನ್ನ ಸ್ಯಾಲರಿ ಅಕೌಂಟ್ ನಿಂದ ನನ್ನ ಪತಿಯ ಅಕೌಂಟಗೆ ಕಂತಿನ ಹಣ ಕ್ರೆಡಿಟ್ ಆಗುತ್ತಿದ್ದು ಅಲ್ಲಿಂದ ಲೋನ್ ಅಕೌಂಟ ಮುಖಾಂತರ ಪಾವತಿಯಾಗುತ್ತಿದೆ ಎಂದು ನುಡಿದಿರುತ್ತಾರೆ.

3) ನಾನು ನನ್ನ ತಾಯಿ ಜಂಟಿಯಾಗಿ ಆಸ್ತಿಯನ್ನು ಖರೀದಿ ಮಾಡಿದ್ದೇವೆ ಎಂದರೆ ನನಗೆ ಅನ್ಯಾಯವಾದ ಕಾರಣ ನನ್ನ ತಾಯಿ ಅಗಿಶಿಣ ಕುಂಕುಮವಾಗಿ ನನಗೆ ಕೊಟ್ಟಿದ್ದಾರೆ. ಅದು ಎಷ್ಟು ಮೌಲ್ಯಕ್ಕೆ ಖರೀದಿಸಲಾಗಿದೆ ನನಗೆ ಗೊತ್ತಿಲ್ಲ, ನನ್ನ ತಾಯಿ ಖರೀದಿ ಮಾಡಿ ಕೊಟ್ಟಿದ್ದು. ಸದರಿ ಆಸ್ತಿ

ಖರೀದಿ ಮಾಡುವ ಕಾಲಕ್ಕೆ ಅನ್ಯಾಯ ಆಗಿತ್ತಾ ಎಂದರೆ ಸಾಕ್ಷಿಯು ನನ್ನ ಪತಿಯು ನನ್ನ ಮೇಲೆ ದೌರ್ಜನ್ಯ ಮಾಡಿ ಹೊರಹಾಕಿದ ಮೇಲೆ ನನಗೆ ಕೊಟ್ಟಿದ್ದು. ನಾನು ಮತ್ತೆ ಅರ್ಜಿದಾರರ ಮನೆಗೆ ಹೋಗಿದ್ದೆ ಆದರೆ ಅವರು ಲಾಕ್ ಮಾಡಿದ್ದರಿಂದ ವಾಪಸ್ಸ ಬಂದಿರುತ್ತೇನೆ. ನನಗೂ ಮತ್ತು ಮಂಜುನಾಥನವರಿಗೆ ಮನೆ ಕೊಂಡುಕೊಂಡು ನಂತರ ಮಾತುಕತೆ ಇತ್ತಾ ಎಂದರೆ ಸಾಕ್ಷಿಯು ನಾನೇ ಮಾತನಾಡಿಸಲು ಪ್ರಯತ್ನಪಟ್ಟರು ಅರ್ಜಿದಾರರು ಮಾತನಾಡುತ್ತಿರಲಿಲ್ಲ. ಮಗನಿಗೆ 22 ವಯಸ್ಸು ಇದೆ. ನನ್ನ ಮಗನ ಜೊತೆ ಈಗಲೂ ಸಹ ಮಾತನಾಡಿಕೊಂಡು ಸಂಪರ್ಕದಲ್ಲಿದ್ದೇನೆ. ಪೋನನಲ್ಲಿ ಮಾತನಾಡುತ್ತೀರಾ ಎಂದರೆ ಸಾಕ್ಷಿಯು ಮೀಟ್ ಆದಾಗ ಮಾತನಾಡುತ್ತೇವೆ ಏಕೆಂದರೆ ನನ್ನ ಜೊತೆ ಮಾತನಾಡಿದರೆ ಮಹಡಿಯಿಂದ ತಳ್ಳಿ ಸಾಯಿಸಿ, ನಿಮ್ಮ ತಾಯಿ ಮೇಲೆ ಕೇಸ್ ಹಾಕುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ಮಗ ಯಲಹಂಕಾದ ಬ್ರಂದಾವನ ಕಾಲೇಜಿನಲ್ಲಿ ಬಿಬಿಎಂ ಮಾಡುತ್ತಿದ್ದು, ಸ್ವಲ್ಪ ಕಾಲ ಪಿಜಿಯಲ್ಲಿದ್ದು ಅಲ್ಲಿ ಊಟ ಸರಿಯಾಗದೇ ಮನೆಗೆ ವಾಪಸ್ಸ ಬಂದಿದ್ದ. ಪಿಜಿ ಹೆಸರು ಗೊತ್ತಿಲ್ಲ ನಮ್ಮ ಯಜಮಾನರೇ ಸೇರಿಸಿದ್ದು.

4) ಬಿಬಿಎಂ ಆದ ನಂತರ ಈಗ ಎಂಬಿಎ ಮಾಡುತ್ತಿದ್ದಾನೆ ಯಾವ ಕಾಲೇಜು ಗೊತ್ತಿಲ್ಲ. ಎಲ್ ಕೆ ಜಿ ಇಂದಲೂ ಇಂದಿನ ಎಲಾ ಶಾಲಾ ಕಾಲೇಜುಗಳ ಎಲ್ಲಾ ಖರ್ಚುಗಳ ಫೀಜ ದಾಖಲಾತಿಗಳು ಅರ್ಜಿದಾರರ ಮನೆಯಲ್ಲಿದ್ದು ನನಗೆ ದೊರೆತಿಲ್ಲ. ಸಾಕ್ಷಿಗೆ ಫೀಜನ ದಾಖಲಾತಿಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಸೀರಿಯಲ್ ನಂಬರ 01 ರಿಂದ 64 ದಾಖಲಾತಿಗಳನ್ನು ಒಟ್ಟಾಗಿ ನಿಶಾನೆಪಿ 7 ಎಂದು ಗುರುತಿಸಲಾಯಿತು.

5) ನನ್ನ ಮಗ ನನ್ನ ಮೇಲೆ ಕಂಪ್ಲೆಂಟ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅರ್ಜಿದಾರರು ನನ್ನ ಮಗನನ್ನು ಬೆದರಿಸಿ ಆತನ ಮೂಲಕ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಎಫ್ ಐ ಆರ್ ಪ್ರತಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ 08 ಎಂದು ಗುರುತಿಸಲಾಯಿತು. ನಿಶಾನೆ ಪಿ 08 ರಲ್ಲಿ ನನ್ನ ಮಗನೇ ಸಾಕ್ಷಿ ಎಂದು ಕೇಳಿದರೆ ಬೆದರಿಸಿ ಹಾಕಿಸಿದ್ದಾರೆ. ಸದರಿ ಪಿರ್ಯಾದು ನನ್ನ ಮಗನ ಹ್ಯಾಂಡ್ ರೈಟಿಂಗ್ ಎಂದರೆ ಸರಿಯಲ್ಲ. ಪಿರ್ಯಾದು ಪ್ರತಿಯಲ್ಲಿರುವ ಬರಹ ನನ್ನ ಮಗನದು ಅಲ್ಲ ಆದರೆ ಸಹಿ ನನ್ನ ಮಗನದು. ಅದು ಈಗಾಗಲೇ ನಿಶಾನೆ ಪಿ 08 ಎಂದು ಗುರುತಿಸಲಾಗಿದೆ. ನಾನು ಗಂಡನ ಸಂಬಂಧಿಕರ ಮೇಲೆ ಪಿರ್ಯಾದು ದಾಖಲಾದ ದಿನವೇ ನನ್ನ ಮಗ ಪಿರ್ಯಾದು ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಚಾಸಾ 3 ಶಿಶಿರ ನನ್ನ ಮಗಳು.

6)ಅರ್ಜಿದಾರರು ಅನೈತಿಕ ಸಂಬಂಧ ಇಟ್ಟುಕೊಂಡು ನನಗೆ ಮಾನಸಿಕ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ನಾನು ಪಿರ್ಯಾದನ್ನು ತಹಶೀಲ್ದಾರ್, ಡಿ.ಸಿ. ಹೆಡ್ ಆಫೀಸ್ ಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅವರ ಸಂಬಂಧ ಇಟ್ಟುಕೊಂಡಿದ್ದರಿಂದಲೇ ಕೊಟ್ಟಿದ್ದೇನೆ. 10

ವರ್ಷಗಳಿಂದ ನನ್ನ ಪತಿ ಅನೈತಿಕ ಸಂಬಂಧ ಇಟ್ಟು ಕೊಂಡಿದ್ದಾರೆ ಎಂದು ನಾನು ತಕಾರಿನಲ್ಲಿ ಬರೆಸಿದ್ದೇನೆ. ಸದರಿ ಹೆಂಗಸಿನ ಹೆಸರನ್ನು ಬರೆಸಿಲ್ಲ. ಎಷ್ಟು ಜನ ಹೆಂಗಸರ ಜೊತೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂದು ಕೇಳಿದರೆ ಸಾಕ್ಷಿಯು ಎಷ್ಟು ಜನ ಅಂತ ಗೊತ್ತಿಲ್ಲ. ಎಷ್ಟು ವರ್ಷಗಳಿಂದ ಹಾಗೂ ಯಾವ ಇಸವಿಯಿಂದ ಅಕ್ರಮ ಸಂಬಂಧವನ್ನು ಆ ರೀತಿ ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಮನೆಯ ಗೃಹ ಪ್ರವೇಶ ಆರೀತಿ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಹೆಂಗಸನ್ನು ಕರೆಸಿಕೊಂಡು ಬಂದು ನನ್ನ ಕಡೆಯಿಂದ ಅರಿಶಿಣ ಕುಂಕುಮ ಕೊಟ್ಟು ಪರಿಚಯ ಮಾಡಿಕೊಟ್ಟರು. ಅನೈತಿಕ ಸಂಬಂಧ ಹೇಗೆ ಗೊತ್ತಾಯಿತು ಎಂದರೆ ನನ್ನ ಯಜಮಾನರೇ ಈ ಹೆಂಗಸಿನ ಜೊತೆ ಅಕ್ರಮ ಸಂಬಧವಿದೆ ಎಂದು ನನಗೆ ನೇರವಾಗಿ ತಿಳಿಸಿದ್ದರು. ಅದಕ್ಕೂ ಮೊದಲು ಅವರು ಫೋನ್ ಕಾಂಟ್ಯಾಕ್ಟ್ ಮಾಡುತ್ತಿದ್ದು ಅವರು ಬೆಳಿಗ್ಗಿನ ಸಮಯ ಅಥವಾ ತಡರಾತ್ರಿ ಮನೆಗೆ ಬರುತ್ತಿದ್ದು ಅದು ವಿಚಾರಿಸಿದಾಗ ಅವರು ಅಕ್ರಮ ಸಂಬಂಧದ ವಿಚಾರವನ್ನು ತಿಳಿಸಿದ್ದರು.

7) ಆ ರೀತಿ ಅಕ್ರಮ ಸಂಬಂಧ ಇದೆ ಎಂದು ನನಗೆ ತಿಳಿಸಿದರೂ ಬೇರೆಯರಿಗೆ ತಿಳಿಸಿಲ್ಲ. ಅರ್ಜಿದಾರಿಗೆ ಯಾವುದೇ ಅಕ್ರಮ ಸಂಬಂಧ ಇಲ್ಲದೇ ಇದ್ದರೂ ನಾನು ಸದಾ ಅನುಮಾನ ಪಡುವ ಮನಸ್ಥಿತಿದ್ದವಳಾಗಿದ್ದು ಅಕ್ಕ ತಂಗಿಯವರ ಜೊತೆ ಮಾತನಾಡಿದರೂ ಸಹ ಅನುಮಾನ ಪಡುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ವಿಡೀಯೋ ಪೋಟೋ ದಾಖಲಾತಿ ಇವೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ಅರ್ಜಿದಾರರು ಮೊದಲು ಶಿರಸ್ತೇದಾರರಿದ್ದು ಈಗ ತಹಶೀಲ್ದಾರರು ಎಂದರೆ ಸರಿ. ಅವರ ಬಳಿ ಖಾತೆ ಪಹಣಿಗಾಗಿ ಸಾಕಷ್ಟು ಜನ ಬರುತ್ತಿದ್ದು ಅವರನೆಲ್ಲಾ ಅನುಮಾನ ಪಡುತ್ತಿದ್ದೇನೇ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ಮನೆಗೆ ಮಕ್ಕಳು ಮನೆ ಬಿಟ್ಟು ಹೋಗುತ್ತಾರೆ ಎಂದರೆ ಸರಿಯಲ್ಲ. ಒಂದು ಬಾರಿಯೂ ನನ್ನ ಮಕ್ಕಳನ್ನು ಪ್ರೀತಿಯಿಂದ ನೋಡಿಕೊಂಡಿಲ್ಲ ಮತ್ತು ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿಲ್ಲ ಎಂದರೆ ಅವರ ಬಟ್ಟೆಯನ್ನು ಈಗಲೂ ನಾನೇ ಒಗೆಯುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಕಾಲವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**